


ಆಗಸ್ಟ್ 14/2022

# ವಿಶ್ವ ಯುವಜನರ ದಿನ
# ದೈವಾರಾಧನಾ ವಿಧಿ



## ಪೂಜಾ ಹೀಠಿಕೆ:

ಪ್ರಿಯರೇ, ಇಂದು ನಮ್ಮ ಭಾರತ ಧರ್ಮಸಭೆಯು ರಾಷ್ಟ್ರೀಯ ಯುವಜನರ ಭಾನುವಾರವನ್ನು ಆಚರಿಸುತ್ತಿದೆ. ಈ ವರ್ಷ ರಾಷ್ಟ್ರೀಯ ಯುವಜನರ ದಿನದ ಧ್ಯಾನದ ವಿಷಯ ಮರಿಯಳು ಪ್ರಯಾಣ ಹೊರಟು ತ್ವರೆಯಾಗಿ ಬಂದಳು (ಲೂಕ :1:39) ಎಂಬುದಾಗಿದೆ. ಪ್ರಸ್ತುತ ಆಧುನಿಕ ಸಮಾಜ ಹಲವು ನೋವು, ಹಿಂಸೆ ಹಾಗೂ ಕ್ರೌರ್ಯದಿಂದ ತುಂಬಿದೆ. ಈ ಆಧುನಿಕತೆಯ ಅಬ್ಬರಕ್ಕೆ ಬಲಿಯಾಗುತ್ತಿರುವುದು ನಮ್ಮ ಯುವಜನರು. ಯುವಜನರ ಮನಸ್ಸು ಮೃದು ಹಾಗೂ ಬಲುಬೇಗ ಯಾವುದಾದರೊಂದು ಸಿದ್ಧಾಂತಕ್ಕೆ ತಲೆಬಾಗುವ ಪ್ರವೃತ್ತಿಯನ್ನು ಹೊಂದಿದ್ದಾರೆ. ಇದ- ರಿಂದ ಅವರು ಅನೇಕ ಸಮಸ್ಯೆ, ಯುದ್ಧ ಹಾಗೂ ಸಂಘರ್ಷಕ್ಕೆ ಶರಣಾಗುತ್ತಾರೆ. ಇಂದಿನ ವಾಚನಗಳು ಕೂಡ ಇಂತಹದೆ ಸಂಘರ್ಷದ ಬಗ್ಗೆ ತಿಳಿಸುತ್ತದೆ. ಆದರೆ ಈ ಸಂಘರ್ಷ ಬಾಹ್ಯ ಸಂಘರ್ಷವಲ್ಲ ಬದಲಾಗಿ ನಮ್ಮ ಪಾಪದ ಸ್ವಭಾವಕ್ಕೆ ವಿರುದ್ಧವಾಗಿ ನಡೆಯುವ ಆಂತರಿಕ ಸಂಘರ್ಷವಾಗಿದೆ. ಭಗವಂತ ನಮ್ಮ ಯುವಜನರ ಬದುಕಿನ ಹಲವು ಸಂಘರ್ಷಗಳಲ್ಲಿ ಜೊತೆಗಿದ್ದು ಅವರಿಗೆ ಜಯನೀಡಲಿ. ಹತಾಶಗೆ ಒಳಗಾಗದೆ ಹಾಗೂ ಬೇಗ ಸೋಲನ್ನು ಒಪ್ಪಿಕೊಳ್ಳದೆ, ಮಾತೆ ಮರಿಯಳಂತೆ ಬೇರೆಯವರ ಕಷ್ಟಕ್ಕೆ ಸ್ಪಂದಿಸಿ ತ್ವರೆಯಾಗಿ ನಿಲ್ಲುವಂತೆ ನಮ್ಮ ಯುವಜನರನ್ನು ದೇವರು ಪ್ರೇರೇಪಿಸಲಿ. ಈ ದಿವ್ಯ ಬಲಿಪೂಜೆಯಲ್ಲಿ ವಿಷೇಶವಾಗಿ ನಮ್ಮ ಯುವಜನರಿಗಾಗಿ ಪ್ರಾರ್ಥಿಸೋಣ. ಅವರ ಉದ್ದೇಶಗಳನ್ನು ಪ್ರಭುವಿಗೆ ಸಮರ್ಪಿಸೋಣ.